ಹುಡುಗರು. ಚಂದ್ರಕಾಂತಯ್ಯ ಚಿಕ್ಕವನಿದ್ದರೂ ತನ್ನ ಸುತ್ತಮುತ್ತ ನಡೆಯುವುದನ್ನು ಅರಿಯುತ್ತಿದ್ದ. ಕೇರಿಯ ಚಿಕ್ಕೋರನ್ನು ಮಠದ ಸಾಲೆಗೆ ಸ್ವಾಮೀಜಿಗಳು ಕರೆತಂದರೂ ಊರ ಚಿಕ್ಕೋರೊಂದಿಗೆ ಕೂಡಿಸಲು ಊರ ಲಿಂಗವಂತರು ತಕರಾರು ತೆಗೆದು ಸೇರಿಸಲಿಲ್ಲ. ಸ್ವಾಮೀಜಿ ಮಠದ ಪೌಳಿಯೊಳಗ ಒಂದು ಬನ್ನಿಮರವಿತ್ತು, ಅಲ್ಲಿ ಕೂಡಿಸುತ್ತಿದ್ದರು. ಕಲಿಸುವ ಅಯ್ಯನ ಮನ ಒಲಿಸಿದ್ದರಿಂದ ಆತ ಅಕ್ಷರ ತಿದ್ದುವುದನ್ನು ಕಲಿಸುತ್ತಿದ್ದ. ಆದರೂ ಕೇರಿಯ ಚಿಕ್ಕೋರು ನಿತ್ಯ ಬರುತ್ತಿರಲಿಲ್ಲ. ದೇಶಕ್ಕ ಸ್ವಾತಂತ್ರ್ಯ ಬಂದು ಹತ್ತು ವರ್ಷಗಳಾಗಿರಬೇಕು. ಊರಿಗೆ ಸರ್ಕಾರಿ ಶಾಲೆ ತರಲು ಸ್ವಾಮೀಜಿ ಯೋಚಿಸಿದ್ದನ್ನು ಚಂದ್ರಕಾಂತಯ್ಯ ಅರಿಯುತ್ತಿದ್ದ. ಚಿಕ್ಕ ಊರೆಂದು, ಜನಸಂಖ್ಯೆ ಕಮ್ಮಿಯೆಂದು ಶಾಲೆಯನ್ನು ಮಂಜೂರು ಮಾಡಲು ಸರ್ಕಾರ ಮುಂದಾಗಲಿಲ್ಲ. ಚಂದ್ರಕಾಂತಯ್ಯ ನಾಕಾರು ವರ್ಷದ ಮಠದ ಸಾಲಿಯಲ್ಲೇ ಕಲಿಯುತ್ತ ಸ್ವಾಮೀಜಿಗಳ ಉಮೇದಿ ಹೆಚ್ಚಿಸುತ್ತಿದ್ದ.

ಊರ ಸ್ಥಿತಿವಂತರ ಜತೆ ಸೇರಿ ಸ್ವಾಮೀಜಿ ಸಮಾಲೋಚನೆ ಮಾಡಿ ಊರಿಗೆ ಸರ್ಕಾರಿ ಶಾಲೆ ಸಿಗದೇ ಹೋದಾಗ ಮಠದ ವತಿಯಿಂದ ಸರ್ಕಾರದ ಮಾನ್ಯತೆ ಪಡೆದು ಶಾಲೆ ನಡೆಸಿದರಾಯಿತೆಂದು ಶಿಕ್ಷಣ ಸಂಸ್ಥೆಯನ್ನು ಸ್ಥಾಪಿಸಿದರು. 'ಬಸವ ಪ್ರಾಥಮಿಕ ಕನ್ನಡ ಶಾಲೆ' ಎಂದು ಹೆಸರಿಟ್ಟು ಆರಂಭಿಸುವ ಹೊತ್ತಿಗೆ, ಮಠದ ಶಾಲೆಯಲ್ಲಿ ಅಕ್ಷರ ಕಲಿತ ನಾಕಾರು ಹುಡುಗರು ಈಗ ಯುವಕರಾಗಿದ್ದರು. ಚಂದ್ರಕಾಂತಯ್ಯನಿಗೆ ಇಪ್ಪತ್ತು ವರ್ಷ ವಯಸ್ಸು. ಸಾಲಿಗೆ ಸೇರಲು ಸಾಧ್ಯವಾಗಲಿಲ್ಲ. ಬದಲಾಗಿ ಅಪ್ಪನ ಜತೆ ಒಕ್ಕಲತನಕ್ಕೆ ನಿಂತುಕೊಂಡ. ಸ್ವಾಮೀಜಿಯವರು ಹೊಲ-ಮನೆ ಕೆಲ್ಸ ಮುಗಿಸಿಕೊಂಡು ಮಠಕ್ಕೆ ಬಂದು ಸೇವೆ ಸಲ್ಲಿಸು ಎಂದು ಹೇಳಿದರು. ಸ್ವಾಮೀಜಿಯವರು ಚಂದ್ರಕಾಂತಯ್ಯನಿಂದ ಪತ್ರಗಳನ್ನು ಬರೆಸುತ್ತಿದ್ದರು. ಊರವರು, ಸುತ್ತಲೂರಿನ ಭಕ್ತರು ಮಠಕ್ಕೆ ಭಕ್ತಿಯಿಂದ ಬೆಳೆದ ದವಸಧಾನ್ಯ, ತರಕಾರಿ ಮಠದ ದಾಸೋಹಕ್ಕೆ ಸಲ್ಲಿಸುತ್ತಿದ್ದರು. ಅದನ್ನು ನೋಡಿಕೊಳ್ಳಾಕ ಚಂದ್ರಕಾಂತಯ್ಯನಿಗೆ ಒಪ್ಪಿಸಿದರು. ಭಕ್ತರು ಮಠಕ್ಕೆ ಆಕಳು ಕರುಗಳನ್ನು ಅರ್ಪಿಸುತ್ತಿದ್ದರು. ದೊಡ್ಡ ಗೋವುಗಳ ಅಂಕಣ ಕಟ್ಟಿಸಿದ್ದ ಚಂದ್ರಕಾಂತಯ್ಯ. ದಾಸ್ತಾನು ಖೋಲಿ ಮಾಡಿದ್ದ. ಪೂರ್ವಕಾಲದಿಂದಲೂ ಊರಲ್ಲಿ ಮಠವಿದ್ದರಿಂದ ಭೂಮಿಯೂ ದಾನವಾಗಿ ಬಂದದ್ದಿತ್ತು. ದಿನೇದಿನೇ ಮಠ ಅಭಿವೃದ್ಧಿ ಹೊಂದಿದಂತೆ ಚಂದ್ರಕಾಂತಯ್ಯನ ಜವಾಬ್ದಾರಿಗಳು ಹೆಚ್ಚಾದವು. ಇದೆಲ್ಲಕ್ಕಿಂತ ಹೆಚ್ಚಾಗಿ ಸ್ವಾಮೀಜಿಯವರು ಬಸವಣ್ಣ ಮತ್ತು ಶರಣರ ಭಕ್ತರಾಗಿದ್ದರು. ಬಸವತತ್ವಗಳನ್ನು ಪ್ರತಿ ಸೋಮವಾರ ಮಠದಲ್ಲಿ ಪ್ರವಚನ ಮಾಡುತ್ತಿದ್ದರು. ಇಷ್ಟಲಿಂಗ ಪೂಜೆ ಮಾಡಬೇಕು; ಅದೇ ಮುಕ್ತಿಗೆ ದಾರಿ ಎಂದು ಹೇಳುತ್ತಿದ್ದರು. ಬೇರೆ ಬೇರೆ ಹೆಸರಿನ ದೇವರುಗಳ ಪೂಜಿಸುವವರನ್ನು, ಹರಕೆ ಮುಡುಪು, ತಪ್ಪು ದಂಡಗಳನ್ನು ಅರ್ಪಿಸುವವರನ್ನು ಬಯ್ಯುತ್ತಿದ್ದರು. ಮೂಢನಂಬಿಕೆಗಳನ್ನು ಆಚರಿಸಬಾರದೆಂದು ಕಟ್ಟುನಿಟ್ಟಾಗಿ ಹೇಳುತ್ತಿದ್ದರು. ಚಂದ್ರಕಾಂತಯ್ಯ ಸ್ವಾಮೀಜಿಗಳ ಹಿಂದಿದ್ದು ಬಸವಣ್ಣನ ಭಕ್ತನಾಗಿದ್ದ.

ಒಂದು ದಿನ ಸ್ವಾಮೀಜಿಗಳಿಂದ ಶರಣ ಕಾರ್ಯಕ್ರಮಕ್ಕೆ ವಿಜಾಪೂರಕ್ಕೆ ಹೋಗಿ ಶರಣರ ವಚನಗಳ ಪುಸ್ತಕಗಳನ್ನು ಹೊತ್ತು ತಂದು ಓದತೊಡಗಿದ. ಚಂದ್ರಕಾಂತಯ್ಯ ಸ್ವಾಮೀಜಿಗಳ ಅನುಮತಿ ಪಡೆದು ಕಪ್ಪು ಹಲಗೆಯನ್ನು ಮಾಡಿಸಿ ಮಠದ ಪೀಠದ ಬದಿಗೆ ನಿಲ್ಲಿಸಿದ. ಮೊದಮೊದಲು ಸೋಮವಾರದ ದಿನ ವಚನವೊಂದು ಬರೆದು ಮಠಕ್ಕೆ ಬರುವ ಭಕ್ತರು ಓದುವಂತೆ, ಓದಲು ಬರದವರಿಗೆ ಓದಿ ಹೇಳುವ ಪರಿಪಾಠ ಹಾಕಿದ. ಮಠದಾಗ ಬಸವ ಜಯಂತಿ ಕಾರ್ಯಕ್ರಮ ಮಾಡಿ ಸಂಭ್ರಮಿಸಿದ. ಸ್ವಾಮೀಜಿಗಳಿಗೆ ಚಂದ್ರಕಾಂತಯ್ಯ ಬಲಗೈ ಶಕ್ತಿಯಾಗಿ ಪರಿಣಮಿಸಿದ. ಚಂದ್ರಕಾಂತಯ್ಯನಿಗೆ ದಾಸೋಹ ಮಂಟಪದಲ್ಲಿ ಊರುಕೇರಿ ಮಂದಿಗೆ ಒಂದೇ ಸ್ಥಾನಮಾನ ಕಲ್ಪಿಸಲು ಯೋಚಿಸಿದ. ಬಸವಣ್ಣನವರು ಕೇರಿಯಲ್ಲಿರುತ್ತಿದ್ದ ಭಕ್ತರ ಮನೆಗೆ ಹೋಗಿ ಬರುತ್ತಿದ್ದರು. ಕಲ್ಯಾಣದಲ್ಲಿ ದಾಸೋಹ ಮಂಟಪದಲ್ಲಿ ಎಲ್ಲ ಜಾತಿ ಮತದವರಿಗೆ ಪ್ರವೇಶವಿತ್ತು ಎಂದು ಸ್ವಾಮೀಜಿಗಳಿಂದ ತಿಳಿದಿದ್ದ. ಈ ಮಠದಲ್ಲೂ ಆ ಪದ್ಧತಿ ಜಾರಿ ಮಾಡಬೇಕೆಂದು ಚರ್ಚಿಸಿದ್ದ. ಸ್ವಾಮೀಜಿಗಳು ಅಸಹಾಯಕರಾಗಿದ್ದರು. ಮೇಲ್ವರ್ಗದ ಊರ ಲಿಂಗವಂತರು ಇದಕ್ಕೆ ಒಪ್ಪುತ್ತಿರಲಿಲ್ಲ. ಮಠದಲ್ಲಿ, ಊರ ದೇವರ ಗುಡಿಗಳಲ್ಲಿ ಅವರಿಗೆ